# ಕರ್ನಾಟಕ ಸರಕಾರ

ಸಂಖ್ಯೆ:ಹಿಂವಕಇ/ದ.ಕ./ವಿನಿ/ಸಿಬ್ಬಂದಿ/ಸಿಆರ್-21/16-17

ಜಿಲ್ಲಾ ಅಧಿಕಾರಿಯವರ ಕಛೇರಿ,
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ,
ಆನೆಗುಂಡಿ ರೋಡ್, ಬಿಜೈ-ಕಾಪಿಕಾಡ್,
ಮಂಗಳೂರು, ದಿನಾಂಕ:17-06-2017

## ಪ್ರಕಟಣೆ

ವಿಷಯ: ದಕ್ಷಿಣ ಕನ್ನಡ ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವಿದ್ಯಾರ್ಥಿ ನಿಲಯಗಳಲ್ಲಿ ಖಾಲಿ ಇರುವ ಅಡುಗೆಯವರು/ಅಡುಗೆ ಸಹಾಯಕರ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡುವ ಬಗ್ಗೆ.

ಉಲ್ಲೇಖ:
1. ಈ ಕಛೇರಿ ಇದೇ ಕ್ರಮಾಂಕದ ಅಧಿಸೂಚನೆ ದಿನಾಂಕ:20-10-2016
2. ಸರಕಾರದ ಆದೇಶ ಸಂಖ್ಯೆ:ಹಿಂವಕ:90:ಬಿಇಟಿ:2016(ಭಾ-2), ಬೆಂಗಳೂರು, ದಿನಾಂಕ: 02-06-2017

ದಕ್ಷಿಣ ಕನ್ನಡ ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವಿದ್ಯಾರ್ಥಿ ನಿಲಯಗಳಲ್ಲಿ ಖಾಲಿ ಇರುವ "ಡಿ" ವೃಂದದ ಅಡುಗೆಯವರು ಮತ್ತು ಅಡುಗೆ ಸಹಾಯಕರ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಈ ಕಛೇರಿ ಅಧಿಸೂಚನೆ ಸಂಖ್ಯೆ:ಹಿಂವಕಇ/ದ.ಕ./ವಿನಿ/ಸಿಬ್ಬಂದಿ/ಸಿಆರ್-21/16-17, ದಿನಾಂಕ:20-10-2016ರಂತೆ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿತ್ತು. ಅದರಂತೆ, ಅರ್ಜಿ ಸಲ್ಲಿಸಿರುವ ಅಭ್ಯರ್ಥಿಗಳ ಪೈಕಿ ಅಭ್ಯರ್ಥಿಯು ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಗಳಿಸಿರುವ ಅಂಕಗಳ ಮೆರಿಟ್ ಆಧಾರದ ಮೇಲೆ 1:5 ಅನುಪಾತದಲ್ಲಿ ಅಭ್ಯರ್ಥಿಗಳ ದಾಖಲಾತಿ ಪರಿಶೀಲನೆಯನ್ನು ನೇತ್ರಾವತಿ ಸಭಾಂಗಣ ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತ್, ಉರ್ವಸ್ಟೋರ್, ಕೊಟ್ಟಾರ, ಮಂಗಳೂರು-ಇಲ್ಲಿ ಅಡುಗೆಯವರ ಹುದ್ದೆಗೆ ದಿನಾಂಕ:22-06-2017 ಮತ್ತು ಅಡುಗೆ ಸಹಾಯಕರ ಹುದ್ದೆಗೆ 23-06-2017 ರಂದು ಪೂರ್ವಾಹ್ನ 10.00 ಗಂಟೆಗೆ ನಡೆಸಲಾಗುವುದು. ದಾಖಲಾತಿ ಪರಿಶೀಲನೆಗೆ ಅಭ್ಯರ್ಥಿಗಳ ಪಟ್ಟಿಯನ್ನು ಅಧಿಕೃತ ವೆಬ್‌ಸೈಟ್ **http://www.dk.nic.in** ರಲ್ಲಿ ಪ್ರಕಟಿಸಲಾಗಿದ್ದು, ಪಟ್ಟಿಯಲ್ಲಿ ಹೆಸರಿಸಿರುವ ಅಭ್ಯರ್ಥಿಗಳು ಕರೆ ಪತ್ರ(Call letter)ವನ್ನು ಅಧಿಕೃತ ವೆಬ್‌ಸೈಟ್ **http://www.dk.nic.in** ನಿಂದ ಡೌನ್‌ಲೋಡ್ ಮಾಡಿಕೊಂಡು ಈ ಕೆಳಕಂಡ ಮೂಲ ದಾಖಲೆಗಳು ಮತ್ತು ಎರಡು ಸೆಟ್ ದೃಢೀಕೃತ ಜೆರಾಕ್ಸ್ ಪ್ರತಿಗಳೊಂದಿಗೆ ದಾಖಲಾತಿ ಪರಿಶೀಲನೆಗೆ ಹಾಜರಾಗುವುದು.

| ದಾಖಲಾತಿ ಪರಿಶೀಲನೆ ಸ್ಥಳ | ಅಡುಗೆಯವರ ಹುದ್ದೆಗೆ ದಿನಾಂಕ | ಅಡುಗೆ ಸಹಾಯಕರ ಹುದ್ದೆಗೆ ದಿನಾಂಕ | ಸಮಯ |
|---|---|---|---|
| ನೇತ್ರಾವತಿ ಸಭಾಂಗಣ, ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತ್, ಕೊಟ್ಟಾರ, ಉರ್ವಸ್ಟೋರ್ಸ್, ಮಂಗಳೂರು | 22-06-2017 | 23-06-2017 | ಪೂರ್ವಾಹ್ನ 10.00 ಗಂಟೆ |

ಹಾಜರುಪಡಿಸಬೇಕಾದ ಮೂಲ ದಾಖಲೆಗಳ ವಿವರ:

| | |
|---|---|
| 1. | ಆನ್‌ಲೈನಿನಲ್ಲಿ ಸಲ್ಲಿಸಿದ ಅರ್ಜಿಯ ಪ್ರತಿ ಹಾಗೂ ಬ್ಯಾಂಕ್ ಚಲನ್ ಪ್ರತಿ |
| 2. | ಕರೆ ಪತ್ರ |
| 3. | ಎಸ್.ಎಸ್.ಎಲ್.ಸಿ.ಅಂಕಪಟ್ಟಿ |
| 4. | ಆದಾಯ ಮತ್ತು ಜಾತಿ ಪ್ರಮಾಣ ಪತ್ರ |
| 5. | ಗುರುತಿನ ಚೀಟಿ (Voter ID/Passport/DL/Pan Card/Bank Passbook/Adhar card) |
| 6. | ಗ್ರಾಮೀಣ ಅಭ್ಯರ್ಥಿ ಪ್ರಮಾಣ ಪತ್ರ |
| 7. | ಕನ್ನಡ ಮಾಧ್ಯಮ ಪ್ರಮಾಣ ಪತ್ರ |
| 8. | ಮಾಜಿ ಸೈನಿಕ ಪ್ರಮಾಣ ಪತ್ರ |
| 9. | ಅಂಗವಿಕಲ ಪ್ರಮಾಣ ಪತ್ರ |
| 10. | ಯೋಜನಾ ನಿರಾಶ್ರಿತ ಪ್ರಮಾಣ ಪತ್ರ |
| 11. | ಭಾವಚಿತ್ರ-2 |
| 12. | ಕರೆಪತ್ರದಲ್ಲಿ ಸೂಚಿಸಿರುವ ಇನ್ನಿತರೆ ದಾಖಲೆಗಳು |

ಈ ಮೇಲಿನ ಎಲ್ಲಾ ಮೂಲ ದಾಖಲೆಗಳು ಮತ್ತು ಎರಡು ಸೆಟ್ ದೃಢೀಕೃತ ಜೆರಾಕ್ಸ್ ಪ್ರತಿ ಮತ್ತು ಎರಡು ಭಾವಚಿತ್ರಗಳೊಂದಿಗೆ ನಿಗದಿತ ಸಮಯಕ್ಕೆ ಸರಿಯಾಗಿ ನಿಗದಿತ ಸ್ಥಳದಲ್ಲಿ ಹಾಜರಿರುವಂತೆ ಸೂಚಿಸಿದೆ. ಈ ಮೇಲೆ ನಿಗದಿಪಡಿಸಿದ ದಿನಗಳ ಹೊರತು ಬೇರೆ ದಿನಗಳಲ್ಲಿ ದಾಖಲೆಗಳನ್ನು ಸಲ್ಲಿಸಲು ಅವಕಾಶವಿರುವುದಿಲ್ಲ. ನಿಗದಿತ ದಿನಾಂಕದಂದು ಹಾಜರಾಗದೇ ಇರುವ ಅಭ್ಯರ್ಥಿಗಳ ಅರ್ಜಿಯನ್ನು ತಿರಸ್ಕರಿಸಲಾಗುವುದು.

ಜಿಲ್ಲಾ ಅಧಿಕಾರಿ ಹಾಗೂ ಸದಸ್ಯ ಕಾರ್ಯದರ್ಶಿ
ಜಿಲ್ಲಾಮಟ್ಟದ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖಾ
ವಿದ್ಯಾರ್ಥಿ ನಿಲಯಗಳಲ್ಲಿ ಖಾಲಿ ಇರುವ
ಅಡುಗೆಯವರು/ಅಡುಗೆ ಸಹಾಯಕರ ಹುದ್ದೆಗಳ
ನೇರ ನೇಮಕಾತಿ ಸಮಿತಿ, ದಕ್ಷಿಣ ಕನ್ನಡ ಜಿಲ್ಲೆ